# ಜಿ.ಎಸ್. ಶಿವರುದ್ರಪ್ಪ

ಒಬ್ಬ ಕವಿ ಮತ್ತೊಬ್ಬ ಕವಿಯ ಬಗ್ಗೆ ಹೇಗೆ ನಡೆದುಕೊಳ್ಳುತ್ತಾನೆ? ಹೇಗೆ ಗೌರವ ಸೂಚಿಸುತ್ತಾನೆ?

ಈ ಕವಿ ಜಿ.ಎಸ್. ಶಿವರುದ್ರಪ್ಪನವರನ್ನು ನಾನು ಬಹಳ ವರ್ಷಗಳಿಂದಲೂ ಬಲ್ಲೆ. ಅವರು ನನಗೆ ತುಂಬಾ ಹಳಬರು. ಮೈಸೂರಿನ ಖಾಸಗಿ ಪ್ರೆಸ್ಸಿನಲ್ಲಿ ನಾನು ಇದ್ದಾಗಲೇ ನನಗೆ ಅವರು ಪರಿಚಿತರು. ಆಗ ಅವರ 'ಕಾರ್ತೀಕ', 'ವಿಮರ್ಶೆಯ ಪೂರ್ವ ಪಶ್ಚಿಮ' ಮುಂತಾದ ಪುಸ್ತಕಗಳನ್ನು ನಾನು ಅಚ್ಚು ಮಾಡಿದ್ದೆ.

ಈಗ ನನ್ನ ಸ್ವಂತ ಪ್ರೆಸ್ ಆದಮೇಲೆ, ಜಿ.ಎಸ್.ಎಸ್. ಈಗಲೂ ನಮ್ಮಲ್ಲಿಗೆ ಬರತೊಡಗಿದರು. ಬೆಂಗಳೂರು ವಿಶ್ವವಿದ್ಯಾಲಯದ ಕೆಲವು ಪುಸ್ತಕಗಳನ್ನು ಆಗ ನಾನು ಅಚ್ಚುಮಾಡುತ್ತಾ ಇದ್ದೆ. ಅವರು ಈಗ ಆ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರೂ ಆಗಿದ್ದರು.

ಇನ್ನೊಂದು ವಿಚಾರ.


'ನಾನು ಒಂದು ಪ್ರೆಸ್ ಮಾಡಬೇಕು ಅಂತ ಇದೀನಿ, ಸಾರ್' ಎಂದು ಅವರ ಕೊಟಡಿಯಲ್ಲಿ ಒಂದು ದಿನ ಮಾತಾಡುತ್ತ ಕುಳಿತಿದ್ದೆ.

'ಹಾಗಾ? ಸಂತೋಷ, ಮಾಡಿ' ಎಂದರು.

'ಹೆಸರು ಏನು ಇಡೋದು?' ಎಂದು ಹಲವು ಹೆಸರುಗಳನ್ನು ಹೇಳಿದೆ. ಅವರೂ ಹಾಂ ಹೂಂ ಎನ್ನುತ್ತ 'ವಿಕಾಸ ಅಂತ ಇಡಬಹುದಲ್ಲ. ಚೆನ್ನಾಗಿರುತ್ತೆ?' ಎಂದರು.

ಹೀಗಾಗಿ ನನ್ನ ಪ್ರೆಸ್ 'ವಿಕಾಸ ಮುದ್ರಣ' ಆಯಿತು.

ಈಗ ಶಿವರುದ್ರಪ್ಪನವರು ನಮ್ಮ ಪ್ರೆಸ್ಸಿಗೆ ವಿಶೇಷವಾಗಿ ಬರುತ್ತ ಇದ್ದರು. ತಮ್ಮ ಸ್ವಂತ ಕೆಲಸಕ್ಕಾಗಿ ಅಲ್ಲ, ವಿಶ್ವವಿದ್ಯಾಲಯದ ಕೆಲಸಕ್ಕೂ ಅಲ್ಲ, ಬೇರೊಂದು ಕೆಲಸಕ್ಕಾಗಿ.



ಶಾಂತ ಸ್ವಭಾವ; ನಗುಮುಖ. ಕವಿ ಆದ್ದರಿಂದ ಅವರ ಮಾತೂ ಮೃದು.

ಹೌದು, ನಮ್ಮ ನಾಡಿನ ಪ್ರಸಿದ್ಧ ಕವಿ ಕೆ.ಎಸ್. ನರಸಿಂಹಸ್ವಾಮಿ ಅವರಿಗೆ ಒಂದು ಅಭಿನಂದನ ಗ್ರಂಥವನ್ನು ಸಮರ್ಪಿಸುವ ಏರ್ಪಾಡು, ಇದಕ್ಕೆ ಸಂಪಾದಕರು: ಜಿ.ಎಸ್. ಶಿವರುದ್ರಪ್ಪ. ಗ್ರಂಥದ ಹೆಸರು: ಚಂದನ

ಒಬ್ಬ ಶ್ರೇಷ್ಠ ಕವಿ ಮತ್ತೊಬ್ಬ ಶ್ರೇಷ್ಠ ಕವಿಗೆ ಸಂಪಾದಕನಾಗಿ ನಿಂತು ಅರ್ಪಿಸುವ ಗ್ರಂಥ ಚಂದನವಲ್ಲದೆ ಮತ್ತೇನು ಆದೀತು? ಅದು ಚಂದನವಾಗಿಯೇ ಕಂಪು ಸೂಸಲು ಸಾಧ್ಯ.

ಇದು ಸಾಕಷ್ಟು ದೊಡ್ಡ ಗ್ರಂಥವೂ ಹೌದು. ಡೆಮ್ಮಿ ಅಷ್ಟದಳದ ಆಕಾರದಲ್ಲಿ ಸುಮಾರು